**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 27.11.2024.**

**<u>ಮುಂ. ಪಾಟೀ ಸವಾಲು : ಶ್ರೀ ಕೆ ಎಸ್ ಆರ್ 5 ನೇ ಪ್ರತಿವಾದಿ ಪರ ವಕೀಲರಿಂದ</u>**

ಸರ್ವೆ ನಂ.154/2 ರಲ್ಲಿ ವಿಸ್ತೀರ್ಣ 5 ಎಕರೆ 10 ಗುಂಟೆ ಪೈಕಿ 1 ಎಕರೆ 10 ಗುಂಟೆ ಸ್ವತ್ತು ಸಾಗುವಳಿ ಭೂಮಿಯಾಗಿದೆ. ಸರ್ಕಾರದವರು ಸರ್ವೇ ನಂ.154 ರಲ್ಲಿ ವಿಸ್ತೀರ್ಣ 4 ಎಕರೆ ಸ್ವತ್ತನ್ನು ಭೂಸ್ವಾಧೀನ ಮಾಡಿದ್ದಾರೆ. ಸರ್ಕಾರದವರು ಸರ್ವೇ ನಂ. 154 ರಲ್ಲಿ 1 ಎಕರೆ 10 ಗುಂಟೆ ಖರಾಬು ಸ್ವತ್ತನ್ನು ಭೂಸ್ವಾಧೀನ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ಖರಾಬು ಸ್ವತ್ತಾಗಿದ್ದು ಮತ್ತು ಅದನ್ನು ಸರ್ಕಾರ ಭೂಸ್ವಾಧೀನ ಮಾಡಿದ್ದರೂ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ 101 ದಾಖಲೆಯ ಸಂಬಂಧ ಮೇಲ್ಮನವಿಯನ್ನು ದೊಡ್ಡವರು ಸಲ್ಲಿಸಿದ್ದಾರೆ. ನಾನು ಅವರು ಮೇಲ್ಮನವಿಯನ್ನು ಸಲ್ಲಿಸಿರುವುದನ್ನು ನೋಡಿಲ್ಲ, ಆದರೇ ಅವರು ಆ ರೀತಿ 1980 ನೇ ಇಸವಿಯಲ್ಲಿ ಹೇಳಿದ್ದಾರೆ.  ಸದರಿ ಮೇಲ್ಮನವಿ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಾನು 2001 ರಿಂದ 2005 ನೇ ಸಾಲಿನ ಪಹಣಿಗಳನ್ನು ಹಾಜರುಪಡಿಸಲು ತೊಂದರೆ ಇರಲಿಲ್ಲ.

ಮನೆಗಳನ್ನು ಕಟ್ಟಲು ಪರವಾನಗಿ ಪಡೆದಿದ್ದೀರಾ ಎಂದರೆ ಸಾಕ್ಷಿಯು ಇರುವ ಮನೆ ಗಳನ್ನು ದುರಸ್ಥಿ ಮಾಡಿದ್ದೇವೆ ಎಂದು ನುಡಿಯತ್ತಾರೆ. ಆ ರೀತಿ ಮನೆಗಳನ್ನು ದುರಸ್ಥಿ ಮಾಡಲು ಒಪ್ಪಿಗೆ ಪಡೆದಿದ್ದೀರಾ ಎಂದರೆ ಒಪ್ಪಿಗೆ ಪಡೆದಿದ್ದೇವೆ ಎಂದು ನುಡಿಯುತ್ತಾರೆ.ಸದರಿ ಪರವಾನಗಿಯನ್ನು ಹಾಜರುಪಡಿಸಿಲ್ಲ. ನಿಪಿ 104 ರಿಂದ 130 ಛಾಯಾ ಚಿತ್ರಗಳು ದಾವಾ

ಸಲ್ಲಿಸಿದ ನಂತರ ತೆಗೆದವು ಎಂದರೆ ಸರಿ. ನಾನು ಸ್ಟೋಡಿಯೋದವರನ್ನು ಕರೆಯಿಸಿ ಪೋಟೋಗಳನ್ನು ತೆಗೆಸಿದ್ದೇನೆ. ಅವರಿಂದ ಬಿಲ್ಗಳನ್ನು ಪಡೆದಿದ್ದು ಹಾಜರುಪಡಿಸಿದ್ದೇನೆ. ನಿಪಿ 132 ರಿಂದ 147 ರಂತೆ ಪೋಟೋಗಳನ್ನು ದಾವೆ ಸಲ್ಲಿಸಿದ ನಂತರ ತೆಗೆಯಲಾಗಿದೆ. ಸದರಿ ಪೋಟೋಗಳನ್ನು ಯಾರು ತೆಗೆದಿದ್ದಾರೆ ನೆನಪಿಲ್ಲ. ಸಾಕ್ಷಿ ಮುಂದುವರೆದು ರಮೇಶ್ ರವರು ಪೋಟೋಗಳನ್ನು ತೆಗೆದಿದ್ದಾರೆ ಎಂದು ನುಡಿಯುತ್ತಾರೆ. ಪೋಟೋಗಳನ್ನು ತೆಗೆದ ಸಂಬಂಧ ಬಿಲ್ಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ಬಿಲ್ಗಳನ್ನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ದಾವೆಯನ್ನು ಸಲ್ಲಿಸುವ ಪೂರ್ವ ಅಲ್ಲಿ ಯಾವುದೇ ಮನೆ ಇರಲಿಲ್ಲ. ದಾವೆ ಸಲ್ಲಿಸಿದ ನಂತರ ಅಲ್ಲಿ ಮನೆಗಳನ್ನು ನಿರ್ಮಿಸಿದ್ದು ಮತ್ತು ಪೋಟೋಗಳನ್ನು ತೆಗೆಯಲಾಗಿದೆ ಎಂದರೆ ಸರಿಯಲ್ಲ. ಮನೆ ತೆರಿಗೆ ಕಟ್ಟುವ ಡಿಮ್ಯಾಂಡ್ ಪ್ರತಿಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಯಾವುದೇ ಮನೆ ನಿರ್ಮಿಸಲು ಒಂದು ಯೋಜನೆ ಮಾಡಬೇಕು ಎಂದರೆ ಸರಿ. ಸದರಿ ಯೋಜನೆಗೆ ಮುನಿಸಿಪಾಲಿಟಿಯಿಂದ ಅಂಗೀಕಾರ ಪಡೆದಿದ್ದೇನೆ. ನಾನು ಯಾವುದೇ ರೀತಿ ಮುನಿಸಿಪಾಲಿಟಿಯಿಂದ ಅಂಗೀಕಾರ ಪಡೆದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(4 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಾಯವಾಕಾಶ ಕೋರಿದ್ದು ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಹಿ/-

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.